

ಗಟ್ಟಿಯಾಗಿ ಓದಬೇಕಾದ ಕವಿತೆಯ ದಾರಿಯನ್ನು ಆರಿಸಿಕೊಂಡರು. ಇದರ ಪರಿಣಾಮವಾಗಿ ಹೆಚ್ಚು ಜನರನ್ನು ತಲುಪಿದರು. ಕೆಲವೊಮ್ಮೆ ಈ ಬಗೆಯ ಜನಪ್ರಿಯತೆಗಳೇ ಒಳ್ಳೆಯ ಕವಿಗೆ ನಿಜವಾದ ಶತ್ರುವೂ ಆಗಿಬಿಡುತ್ತದೆಯೇನೋ ಎಂದು ನನಗೆ ಹಲವು ಸಲ ಅನ್ನಿಸಿದೆ. ನಮ್ಮ ಓದು ಮತ್ತು ಕೇಳುವಿಕೆಗಳು ನೇರ-ಸರಳ ಕವಿತೆಗಳಿಗೆ, ಹಾಡುಗಳಿಗೆ ಸೀಮಿತವಾಗಿ, ಕನ್ನಡ ಕಾವ್ಯಕ್ಕೆ ಹೊಸ ಮಾತನ್ನು ಸೇರಿಸುವ ಮುಖ್ಯ ಕವಿತೆಗಳು ಬದಿಗೆ ಸರಿಯುವ ಅಪಾಯ ಇದರಲ್ಲಿದೆ. ಎಚ್‌ಎಸ್‌ವಿ ಅವರ 'ಪಾಪ್ಯುಲರ್' ಭಾವಗೀತೆಗಳ ಅಬ್ಬರದಲ್ಲಿ ಅವರ 'ಕನ್ನಡಿಯ ಸೂರ್ಯ', 'ಭಾಷೆಯನ್ನು ಹೇಗೂ ಬಳಸಬಹುದು', 'ಪುನರಾಗಮನ', 'ಪ್ರಣಯತರಂಗ', 'ಒಂದು ಮರಿಮೀನಿಗೆ!', 'ಬೀಜಾಕ್ಷರ' ಇತ್ಯಾದಿ ಹತ್ತಾರು ಸಂಕೀರ್ಣ ಕವಿತೆಗಳು ಹೆಚ್ಚು ಚರ್ಚೆಗೆ ಒಳಪಡಲಿಲ್ಲ. ಎಚ್‌ಎಸ್‌ವಿ ಅವರು 'ಕವಿ' ಮತ್ತು 'ಕವಿತೆ'ಯನ್ನು ಕುರಿತು ಬರೆದ ನೂರಾರು ಕವಿತೆಗಳೇ ಒಂದು ಸಂಶೋಧನಾ ಗ್ರಂಥವಾಗಬಹುದು. ಭಾಷೆಯ ಬಗೆಗೆ ಆತ್ಮವಿಶ್ವಾಸ, ನಂಬಿಕೆ ಇಲ್ಲದ ಯಾವ ಕವಿಯೂ ಇಷ್ಟು ಬಗೆಗಳಲ್ಲಿ 'ಕಾವ್ಯ'ವನ್ನು ಕುರಿತಂತೆ, ಭಾಷೆಯನ್ನು ಕುರಿತಂತೆ ಬರೆಯಲಾಗುವುದಿಲ್ಲ ಮತ್ತು ಇದು ಕವಿಯ ಕಾವ್ಯಮೀಮಾಂಸೆ ಕೂಡ ಆಗಿರುತ್ತದೆ ಎನ್ನುವುದನ್ನು ನಾವು ಗಮನಿಸಬೇಕಿದೆ.

ಎಚ್‌ಎಸ್‌ವಿ ಅವರ ಕಾವ್ಯದಲ್ಲಿನ ವೈಚಾರಿಕತೆಯ ಕೊರತೆಯ ಕುರಿತು ಇರುವ ಆಕ್ಷೇಪಣೆಗಳ ಬಗ್ಗೆ ಒಂದೆರಡು ಮಾತನ್ನು ಹೇಳಬೇಕು: ಅವರ ಭಾವಗೀತೆಗಳ ಜನಪ್ರಿಯತೆಯಲ್ಲಿ ಮೂಲೆಸೇರಿರುವ ಅಥವಾ ಮುಕ್ಕಾದಂತೆ ಕಾಣುವ ಇತರೆ ಒಳ್ಳೆಯ ಕವಿತೆಗಳ ಸರಿಯಾದ ಓದು/ಚರ್ಚೆ ಆಗಿಲ್ಲದೆ ಇರುವುದು ಇದರ ಒಂದು ನೆಲೆ. ಮತ್ತೊಂದು, ಸಾಮಾಜಿಕ ನಿಲುವುಗಳ ಇರುವಿಕೆ ಅಥವಾ ಇಲ್ಲದಿರುವಿಕೆಗಳ ಹುಡುಕಾಟವನ್ನು ಕಾವ್ಯದ ಹಿನ್ನೆಲೆಯಲ್ಲಿ ನೋಡುವಾಗ ನಮಗೊಂದು ಎಚ್ಚರವಿರಬೇಕು. ಅಂಥ 'ಕಾವ್ಯ ಎಚ್ಚರ'ವು ಬೇರೆಬೇರೆ ಕಾರಣದಿಂದಾಗಿ ನಮ್ಮ ಕಾಲದಲ್ಲಿ ಬಹುತೇಕ ನಾಶಗೊಂಡಿರುವುದರಿಂದ ಕೂಡ ಇಂತಹ ಆಕ್ಷೇಪಣೆಗಳು ಏಳುತ್ತವೆ ಅನ್ನಿಸುತ್ತದೆ. ಎಚ್‌ಎಸ್‌ವಿ ಅವರ ಬರಹಗಳನ್ನು ನಿರಂತರವಾಗಿ ಅಭ್ಯಸಿಸುತ್ತ ಬಂದಿರುವ ನನಗೆ, ಕಾವ್ಯದ ಮುಖ್ಯನೆಲೆಗಳಾದ ವರ್ಣನೆ, ಭಾವನೆ, ಭಾಷೆ ಮತ್ತು ದರ್ಶನಗಳಲ್ಲಿ ಅವರ ಕವಿತೆಗಳು ಮೊದಲ ಮೂರರಲ್ಲಿ ತೋರುವ ಪರಿಣತಿಯನ್ನು ಹೊಸದನ್ನು ಕಾಣುವ/ಕಟ್ಟುವ